# ಜನವಿರೋಧಿ ಪರಿಸರ ವಿರೋಧಿ
# ಡ್ಯಾಂ ಯೋಜನೆ ರದ್ದಿಗಾಗಿ ಹೋರಾಡೋಣ!
# ಜನರ ಮೇಲಿನ ಪೊಲೀಸರ
# ಫ್ಯಾಸಿಸ್ಟ್ ದೌರ್ಜನ್ಯವನ್ನು ಹಿಮ್ಮೆಟ್ಟಿಸೋಣ!

**ಆತ್ಮೀಯ ರೈತ-ಕೂಲಿ-ಕಾರ್ಮಿಕರೇ, ಆದಿವಾಸಿಗಳೆ, ಮಹಿಳೆಯರೆ,**

ನಾಡ್ಪಾಲು ಗ್ರಾಮದ ಕೂಡ್ಲು, ವಣಜಾರು, ಅಜ್ಜೊಳ್ಳಿ, ಮೇಗದ್ದೆ ಮುಂತಾದ ಹಳ್ಳಿಗಳ ಬಳಿ 3-4 ದೊಡ್ಡ ಹೊಳೆಗಳು ಸೇರಿ ಸೀತಾನದಿಯಾಗಿ ಹರಿಯುತ್ತಿದೆ. ಈ ನದಿಗೆ ಸೇರುವ ಬಿಡಿಬಿಡಿ ಹೊಳೆಗಳನ್ನು ಅಕ್ರಮವಾಗಿ ಅಧ್ಯಯನ ಮಾಡಿ, ಪಬ್ಲಿಕ್ ಹಿಯರಿಂಗ್ ನಡೆಸದೆಯೇ, ಅದರ ಬಗ್ಗೆ ಜನರಿಗೆ ಯಾವುದೇ ಮಾಹಿತಿ ನೀಡದೆ ಜನರನ್ನು ಗ್ರಾಮಗಳನ್ನು ನೀರಿನಲ್ಲಿ ಮುಳುಗಿಸಲು ಜನ ವಿರೋಧಿ ಪರಿಸರ ವಿರೋಧಿ ಅಕ್ರಮ ಡ್ಯಾಮ್ ಕಟ್ಟಲು ಸರ್ಕಾರ ಸಂಚು ರೂಪಿಸಿದೆ. ಈಗಾಗಲೇ ಸಿದ್ಧತೆಯ ಕೆಲಸಗಳನ್ನು ಕೂಡ ಪ್ರಾರಂಭಿಸಿದೆ.

ಈ ಗ್ರಾಮಗಳ ಜನ ನೂರಾರು ವರ್ಷಗಳಿಂದ ಕಾಡನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಇದುವರೆಗೆ ರಾಜಕೀಯ ಪಕ್ಷಗಳು ಇವರನ್ನು ಓಟು ಬ್ಯಾಂಕ್‌ಗಳಾಗಿ ಬಳಸಿಕೊಂಡರೇ ವಿನಃ ಇಲ್ಲಿನ ಜನರನ್ನು ಕೇವಲ ನಾಗರಿಕರನ್ನಾಗಿಯೂ ಸಹ ಪರಿಗಣಿಸಿಲ್ಲ. ವಿದ್ಯುತ್, ಸೇತುವೆ, ಶಾಲೆ, ಆಸ್ಪತ್ರೆಯಂತಹ ಯಾವುದೇ ನಾಗರಿಕ ಸವಲತ್ತುಗಳನ್ನೂ ಇಲ್ಲಿನ ಜನ ಕಂಡಿಲ್ಲ. ಕೆಲವು ಮನೆಗಳಿಗೆ ಬಿಪಿಎಲ್ ಕಾರ್ಡ್, ಹಕ್ಕುಪತ್ರಗಳೂ ದೊರೆತಿಲ್ಲ. ಹೀಗೆ ಸರ್ಕಾರಗಳು ಈ ಜನರನ್ನು ನಿರ್ಲಕ್ಷಿಸುತ್ತಲೇ ಬಂದಿವೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಜನರು ಬದುಕಿಗಾಗಿ ರಾಂಪತ್ರೆ, ಮುರುಗನಹುಳಿ, ಜೇನು ಇತ್ಯಾದಿ ಕಾಡುತ್ಪತ್ತಿಯನ್ನು ಸಂಗ್ರಹಿಸಲು ಕಾಡಿಗೆ ಹೋದರೆ ಅರಣ್ಯ ಇಲಾಖೆ ಸಾಮ್ರಾಜ್ಯಶಾಹಿ ಯೋಜನೆಗಳನ್ನು ಜಾರಿಗೊಳಿಸಲು ರಾಷ್ಟ್ರೀಯ ಉದ್ಯಾನ, ರಕ್ಷಿತಾರಣ್ಯ, ಮೀಸಲು ಅರಣ್ಯ, ಅಭಯಾರಣ್ಯ, ಸಾಮಾಜಿಕ ಅರಣ್ಯಗಳ ಹೆಸರಿನಲ್ಲಿ ಜನರನ್ನು ಒಕ್ಕಲೆಬ್ಬಿಸುವ ಸಂಚು ರೂಪಿಸುತ್ತಲೇ ಜನರಿಗೆ ದಂಡ ಹಾಕುವುದು, ಸುಳ್ಳುಕೇಸುಗಳನ್ನು ಹಾಕಿ, ಕ್ರಿಮಿನಲ್‌ಗಳಂತೆ ಚಿತ್ರಿಸಿ, ಚಿತ್ರಹಿಂಸೆಗೊಳಪಡಿಸುತ್ತಿತ್ತು. ನಕ್ಸಲ್ ಚಳುವಳಿಯಿಂದಾಗಿ ಅರಣ್ಯ ಇಲಾಖೆ ದೌರ್ಜನ್ಯ ಕಡಿಮೆಯಿದ್ದರೂ ಜನರಿಗೆ ವಿದ್ಯುತ್, ಸೇತುವೆಯಂತಹ ಮೂಲಭೂತ ಸೌಕರ್ಯಗಳು ಸಿಗದಂತೆ ಅದು ತಡೆಹಿಡಿದಿದೆ.

ಇಲ್ಲಿನ ಜನರು ಮಾಡುವ ಕಿರು ಅರಣ್ಯ ಉತ್ಪನ್ನಗಳಿಗೆ ಸರಿಯಾದ ಬೆಲೆ ನೀಡದೇ ವ್ಯಾಪಾರಿಗಳು ವಂಚಿಸುತ್ತಿದ್ದಾರೆ. ಎಲ್ಲಾದರೂ ಕೂಲಿಗೆಂದು ಹೋದರೆ ಮಾಲೀಕರು ಕಡಿಮೆ ಕೂಲಿ ಕೊಟ್ಟು ಮೋಸಗೊಳಿಸುತ್ತಿದ್ದಾರೆ. ನಕ್ಸಲ್ ನಿಗ್ರಹ ಪಡೆಗಳು ಇಲ್ಲಿನ ನಿವಾಸಿಗಳ ಮೇಲೆ ಏಕಾಏಕಿ ಎರಗಿ ನಕ್ಸಲೀಯರಿಗೆ ಸಹಕರಿಸುತ್ತಿದ್ದಾರೆಂದು ಮನೆಗಳನ್ನು ಜಪ್ತಿ ಮಾಡುವುದು, ಪ್ರಾಣ ಬೆದರಿಕೆ ಹಾಕುವುದು, ಹೊಡೆಯುವುದು, ಗೂಂಡಾಗಿರಿ ಮಾಡುವುದು, ಮುಗ್ಧ ಆದಿವಾಸಿಗಳನ್ನು ಅಕ್ರಮವಾಗಿ ಬಂಧಿಸಿ ಜಾಮೀನುರಹಿತ ಕೇಸು ಹಾಕಿ 'ದೇಶದ್ರೋಹಿ'ಗಳಂತೆ ಬಿಂಬಿಸಿ ಚಿತ್ರಹಿಂಸೆಗೊಳಪಡಿಸುತ್ತಿದ್ದಾರೆ. ಅಲ್ಲದೇ ಜನರನ್ನು ಬೆದರಿಸಿ, ಹಣದ ಆಮಿಷವೊಡ್ಡಿ ಮಾಹಿತಿದಾರರನ್ನಾಗಿಸುವ ಹೇಯ ಕೃತ್ಯಗಳನ್ನು ನಡೆಸುತ್ತಿವೆ. ಇದೀಗ ಸೌಲಭ್ಯ ಸವಲತ್ತು ಒದಗಿಸುತ್ತೇವೆಂದು ನಂಬಿಸಿ ಖಾಲಿ ಹಾಳೆಗಳ ಮೇಲೆ ಜನರಿಂದ ಸಹಿ ಹಾಕಿಸಿಕೊಂಡು ತಮಗೆ ತೋಚಿದಂತೆ ಬರೆದು ಜನರೆಲ್ಲರೂ ಡ್ಯಾಮ್‌ನ ಪರವಾಗಿದ್ದಾರೆಂದು ಎ.ಎನ್.ಎಫ್ ಪ್ರಚಾರ ನಡೆಸುತ್ತಿದೆ.

ಈ ಎಲ್ಲಾ ದಮನಕಾಂಡವನ್ನು ಜನರು ಎದುರಿಸುತ್ತಾ ಕಾಡಿನಲ್ಲಿ ಹುಟ್ಟುವ ಹೊಳೆಗಳನ್ನು ಆಧರಿಸಿ ಅಲ್ಪಸ್ವಲ್ಪ ಗದ್ದೆ ತೋಟಗಳನ್ನು ಮಾಡಿಕೊಂಡರೆ ಶೋಷಕರ ಸರ್ಕಾರಗಳು ಖಾಸಗೀ ಕಂಪೆನಿಗಳು ಅದಕ್ಕೂ ಅವಕಾಶ ನೀಡದೇ ಜನರನ್ನು ಅವರ ಭೂಮಿಯಿಂದಲೂ ಎತ್ತಂಗಡಿ ಮಾಡಲು ಜನರಿಗೆ ಆ ಡ್ಯಾಮ್ ಬಗ್ಗೆ ಯಾವುದೇ ಮಾಹಿತಿ, ಭರವಸೆಯನ್ನೂ ನೀಡದೇ ಏಕಾಏಕಿಯಾಗಿ ಅಕ್ರಮ ಡ್ಯಾಂ ಅನ್ನು ಕಟ್ಟಲು ಹೊರಟಿದೆ. ಈ ಯೋಜನೆಯನ್ನು ಗ್ರಾಮಸ್ಥರು ಹಿಂದಿನಿಂದಲೂ ಪ್ರತಿಭಟಿಸುತ್ತಲೇ ಬಂದಿದ್ದಾರೆ. ಆದರೆ ಅವರ ಕೂಗಿಗೆ ಕಿವಿಗೊಡದೇ ಸರ್ಕಾರ ಈ ಡ್ಯಾಂ ಅನ್ನು ಜಾರಿ ಮಾಡುತ್ತಿದೆ. ರೈತರು ದೇಶದ ಬೆನ್ನೆಲುಬು ಎಂದು ಹೇಳಿದರೂ ಫ್ಯಾಸಿಸ್ಟ್ ಸರ್ಕಾರಗಳು ರೈತರ ಬೆನ್ನುಮೂಳೆಯನ್ನು ಮುರಿದು ಮಾನವ ವಿರೋಧಿ ಯೋಜನೆಯನ್ನು ತಂದು ಹೋರಾಟನಿರತ ಜನರನ್ನು ಲಾಠಿ ಬೂಟು ಬಂದೂಕಿನ ಮೂಲಕ ಭಯಭೀತ ವಾತಾವರಣವನ್ನು ಮೂಡಿಸಿ ರೈತರನ್ನು ಆದಿವಾಸಿಗಳನ್ನು ಉಸಿರುಕಟ್ಟಿಸಿ ಕೊಲ್ಲುತ್ತಿದೆ.

ನಾಡ್ಪಾಲು ಗ್ರಾಮದಲ್ಲಿ ನಿರ್ಮಿಸಲು ಹೊರಟಿರುವ ಅಕ್ರಮ ಡ್ಯಾಮ್ ಎಂತಹ ಅಪಾಯಕಾರಿಯೆಂದರೆ: ಇದರಿಂದ ತಯಾರಾಗುವ ವಿದ್ಯುತ್ ಇಲ್ಲಿನ ಜನತೆಗಾಗಿಯಲ್ಲ, ದೊಡ್ಡದೊಡ್ಡ ಖಾಸಗೀ ದಲ್ಲಾಳಿ ಬಂಡವಾಳಶಾಹಿಗಳಿಗಾಗಿ ಸ್ಥಳೀಯ ನಿವಾಸಿಗಳು ನಿರಾಶ್ರಿತರಾಗಬೇಕಿದೆ. ಅಲ್ಲದೇ ಅದೇ ಹೊಳೆಗಳನ್ನು ಸೀತಾನದಿಯುದ್ದಕ್ಕೂ ಆಧರಿಸಿ ಬದುಕುತ್ತಿರುವ ಸಾವಿರಾರು ಕುಟುಂಬಗಳಿಗೆ ಜನರಿಗೆ ಈ ಡ್ಯಾಮ್ ಮಾರಕವಾಗಿದೆ. ಇದು ಮಾನವ ಸಮುದಾಯವನ್ನು ನಾಶ ಮಾಡುವುದರ ಜೊತೆಗೆ ಸಾವಿರಾರು ಎಕರೆ ಕಾಡು ಪರಿಸರವನ್ನು, ಕಾಡಿನಲ್ಲಿರುವ ವಿವಿಧ ಜೀವ ವೈವಿಧ್ಯಗಳನ್ನು, ಪ್ರಾಣಿ ಸಂಕುಲಗಳನ್ನು ನಾಶ ಮಾಡಿ ಬರಗಾಲ ಭೂಕಂಪದಂತಹ ಪ್ರಕೃತಿ ವಿಕೋಪಗಳಿಗೆ ದಾರಿ ಮಾಡುತ್ತದೆ. ಹಾಗಾಗಿ ಈ 'ಅಕ್ರಮ ಡ್ಯಾಂ ಅನ್ನು ರದ್ದುಗೊಳಿಸಲಿಕ್ಕಾಗಿ', 'ಜನರ ನೆಲ, ಜಲ, ಬದುಕನ್ನು ಉಳಿಸಿಕೊಳ್ಳಲಿಕ್ಕಾಗಿ' ಎಲ್ಲಾ ರೈತ-ಕೂಲಿಗಳು, ಆದಿವಾಸಿಗಳು, ಮಹಿಳೆಯರು, ಪ್ರಜಾತಂತ್ರವಾದಿಗಳೂ ಒಗ್ಗೂಡಿ ರಾಜಿರಹಿತ ಹೋರಾಟವನ್ನು ನಡೆಸಬೇಕೆಂದು ಸಿಪಿಐ (ಮಾವೋವಾದಿ) ಪಕ್ಷ ಕರೆ ನೀಡುತ್ತದೆ.

- ಜನವಿರೋಧಿ ಪರಿಸರ ವಿರೋಧಿ ಉದ್ದೇಶಿತ ನಾಡ್ಪಾಲು ಗ್ರಾಮದ ಅಕ್ರಮ ಡ್ಯಾಮ್ ಯೋಜನೆ ರದ್ದಾಗಲಿ!
- ನಾಡ್ಪಾಲು ಗ್ರಾಮದ ಜನತೆಯನ್ನು ನಿರಾಶ್ರಿತರನ್ನಾಗಿಸಲು ಹೊರಟಿರುವ ಅಕ್ರಮ ಡ್ಯಾಮ್ ಯೋಜನೆಯ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಡೋಣ!
- ಜನರ ಮೇಲೆ ನಕ್ಸಲ್ ನಿಗ್ರಹ ಪಡೆಗಳು ನಡೆಸುತ್ತಿರುವ ನರಹಂತಕ ಫ್ಯಾಸಿಸ್ಟ್ ದೌರ್ಜನ್ಯಗಳಿಗೆ ಜನರೆಲ್ಲಾ ಸಂಘಟಿತರಾಗಿ ಪ್ರತೀಕಾರ ತೀರಿಸಿಕೊಳ್ಳೋಣ!
- ಮಲೆನಾಡು - ಕರಾವಳಿ ಭಾಗದಲ್ಲಿರುವ ಎಲ್ಲಾ ಶೋಷಕರನ್ನು ಒದ್ದೋಡಿಸೋಣ! ಜನರ ರಾಜಕೀಯ ಅಧಿಕಾರವನ್ನು ಸ್ಥಾಪಿಸೋಣ!
- ಕಾಡು - ನೆಲ - ಜಲ ಸಂಪತ್ತಿನ ಮೇಲೆ ಜನರ ಅಧಿಕಾರವನ್ನು ಸ್ಥಾಪಿಸೋಣ!
- ಆದಿವಾಸಿ, ರೈತ-ಕೂಲಿ, ಪ್ರಗತಿಪರ, ಪ್ರಜಾತಂತ್ರವಾದಿಗಳ ಐಕ್ಯತೆ ಚಿರಾಯುವಾಗಲಿ!
- ಸಿಪಿಐ (ಮಾವೋವಾದಿ) ಜಿಂದಾಬಾದ್!
- ನೂತನ ಪ್ರಜಾತಾಂತ್ರಿಕ ಕ್ರಾಂತಿಯನ್ನು ಯಶಸ್ವಿಗೊಳಿಸೋಣ!

ಕರಾವಳಿ ಏರಿಯಾ ಸಮಿತಿ
ದೃಕ್ಪಥ ಪ್ರದೇಶ, ಕರ್ನಾಟಕ

ಮನವಿ: ನೀವೂ ಓದಿ, ಇತರರಿಗೂ ಓದಿಸಿ